# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

## ಶಿವಾಜಿನಗರ ವಿಭಾಗ, ವಸಂತನಗರ ಉಪವಿಭಾಗ

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:20-08-2022 ಸೋಮವಾರ ರಂದು ವಾರ್ಡ್ ಸಂಖ್ಯೆ:110 ಸಂಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ ಬೆಂಗಳೂರು ವಾರ್ಡ್ ಕಛೇರಿಯಲ್ಲಿ ಮಧ್ಯಾಹ್ನ 3.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾದವರು.**

| ಕ್ರಮ ಸಂಖ್ಯೆ | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ರಮೇಶ್ | ನೋಡಲ್ ಅಧಿಕಾರಿಗಳು | |
| 2 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು (ಪ್ರಭಾರ) | |
| 3 | ಶ್ರೀ. ಲಕ್ಷ್ಮೀನಾರಾಯಣ | ಕೆಲಸ ಪರಿವೀಕ್ಷಕರು | |
| 4 | ಶ್ರೀ.ಪ್ರಕಾಶ್ ನೆಡೆಗಾಂಡಿ | ಎಎಪಿ ಸದಸ್ಯರು | |
| 5 | ಶ್ರೀ.ಈರಣ್ಣ | ಹಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 6 | ಶ್ರೀ. ಬಾಬು | ಸಾರ್ವಜನಿಕರು | |
| 7 | ಶ್ರೀ. ಶ್ರೀನಿವಾಸ್ ವಿ. | ಕಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 8 | ಶ್ರೀ.ಕಿರಣ್ | ಸಾರ್ವಜನಿಕರು | |
| 9 | ಶ್ರೀ.ರಾಮಲಿಂಗ ರೆಡ್ಡಿ | ಎನ್.ಜಿ.ಓ | |
| 10 | ಶ್ರೀ.ಜಗದೀಶ್ | ವಕೀಲರು | |
| 11 | ಶ್ರೀ.ಚೆನ್ನಪ್ಪಾಜಿ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (BWSSB) | |
| 12 | ಶ್ರೀ.ಆನಂದ ಎನ್. | ಸಾರ್ವಜನಿಕರು | |

**ಸಭೆಯಲ್ಲಿ ಚರ್ಚಿಸಿರುವ ವಿಷಯಗಳು**

1) ವಾರ್ಡ್ ಸಂಖ್ಯೆ:110 ರ ವ್ಯಾಪ್ತಿಯಲ್ಲಿ ಸಿ.ಸಿ ಕ್ಯಾಮಗಳ ನಿರ್ವಹಣೆ ಬಗ್ಗೆ ತೆಗೆದುಕೊಂಡ ಕ್ರಮದ (ನಿರ್ಭಯ ಸ್ಕೀಮ್) ಸುಮಾರು 28 ಕ್ಯಾಮರ್‌ಗಳು ನಿರ್ವಹಣೆ ನಡೆಯುತ್ತಿದ್ದಾಗಿ ಪ್ರಕಾಶ್ ನೆಡುಂಗಾಡಿ ಮಾತಾನಾಡಿದರು

   ಕ್ರಮ: ಸಂಚಾರಿ ಪೊಲೀಸ್ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ಕ್ರಮಕೈಗೊಳ್ಳುವುದಾಗಿ ವಿವರಿಸಿದರು.

2) ವಾರ್ಡ್ ನಂ.110 ರಿಚ್‌ಮಂಡ್ ವೃತ್ತದಲ್ಲಿನ ಸಂಚಾರಿ ಸೈನ್ ಬೋರ್ಡ್ ಸರಿಯಾದ ರೀತಿಯಲ್ಲಿ ಅಳವಡಿಸದೆ ವಿರುದ್ಧ ದಿಕ್ಕಿನಲ್ಲಿ ಅಳವಡಿಸಲಾಗಿದ್ದು ಈ ಬಗ್ಗೆ ಸಂಚಾರಿ ಪೊಲೀಸ್ ಠಾಣೆಯವರಿಗೆ ದೂರು ನೀಡಲು ಶ್ರೀ.ಆನಂದ ಪ್ರಮೋದ್ ಮಾತನಾಡಿದರು.

   ಕ್ರಮ: ಪೋಲಿಸ್ ಇನ್ಸ್‌ಪೆಕ್ಟರ್ ಕ್ರಮಕೈಗೊಳ್ಳುವುದಾಗಿ ವಿವರಿಸಿದರು.

Scanned with CamSca

3) ವಾರ್ಡ್ ಸಂಖ್ಯೆ:110 ರ ಕಲ್ಯಾಣಿ ರಸ್ತೆಯು ಕಿರಿದಾಗಿ ಸುಮಾರು 12 ರಿಂದ 15 ಅಡಿ ಅಗಲಿವಿದ್ದು, ಆ ರಸ್ತೆಯ ಎರಡು ಬದಿ ವಾಹನ ನಿಲುಗಡೆ ಮಾಡುತ್ತಿದ್ದು ಸಾರ್ವಜನಿಕ ಸಂಚಾರಕ್ಕೆ ಅಡಿಯಾಗುತ್ತಿರುತ್ತದೆಂದು ಶ್ರೀ.ಬಾಬು ರವರು ಮಾತಾನಾಡಿದರು.

ಕ್ರಮ: ಸಂಚಾರ ಪೋಲಿಸ್ ಇನ್ಸ್‌ಪೆಕ್ಟರ್ ಕ್ರಮಕೈಗೊಳ್ಳುವುದಾಗಿ ವಿವರಿಸಿದರು

4) ವಾರ್ಡ್ ಸಂಖ್ಯೆ:110 ರ 1ನೇ ಅಡ್ಡರಸ್ತೆ ಸಂಪಂಗಿರಾಮನಗರದಲ್ಲಿ ವಾಹನ ನಿಲುಗಡೆಯಿಂದ ಸಂಚಾರಕ್ಕೆ ತೊಂದರೆಯಾಗಿರುವುದಾಗಿ ಶ್ರೀ.ಬಾಬು ರವರು ತಿಳಿಸಿದರು

ಕ್ರಮ: ಸಂಚಾರ ಪೋಲಿಸ್ ರವರಿಗೆ ತಕ್ಷಣ ಕ್ರಮಕೈಗೊಳ್ಳಲು ತಿಳಿಸಿದರು

5) ವಾರ್ಡ್ ಸಂಖ್ಯೆ:110 ವ್ಯಾಪ್ತಿಯಲ್ಲಿ 1ನೇ ಮುಖ್ಯ ರಸ್ತೆಯ ವುಡ್‌ಲ್ಯಾಂಡ್ ಹೋಟೆಲ್ ಹತ್ತಿರ ನೀರು ಹರಿದು ರಸ್ತೆಯಲ್ಲಿ ಹರಿದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಶ್ರೀ.ಪ್ರಮೋದ್ ಆನಂದ ತಿಳಿಸಿದರು.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು BWSSB ಇಲಾಖೆಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

6) **ವಾರ್ಡ್ ಸಂಖ್ಯೆ**:110 ರಲ್ಲಿ ರಾಜಾರಾಮ್ ಮೋಹನ್‌ರಯ್ ರಸ್ತೆಯಿಂದ ಬರುವ ವಾಹನಗಳ ರಭಸಕ್ಕೆ ತಡೆ ಹಿಡಿಯಲು ರಸ್ತೆ ಉಬ್ಬುಗಳನ್ನು ಹಾಕಲು ಸೂಚಿಸಿದರು ಟಿ.ಇ.ಸಿ ಇಲಾಖೆಗೆ ರಸ್ತೆಗೆ ಅಳವಸಿಸಿರುವ ಸೈವಾಕ್ ಮೇಲು ಸೇತುವೆ ಲಿಫ್ಟ್ ಕಾರ್ಯನಿರ್ವಹಿಸದೆ ವೃದ್ದರಿ ಮತ್ತು ಚಿಕ್ಕ ಮಕ್ಕಳಿಗೆ ತೊಂದರೆಯಾಗುತ್ತಿರುವುದಾಗಿಶ್ರೀ.ಪ್ರಮೋದ್ ಆನಂದ ಚರ್ಚಿಸಿದರು

ಕ್ರಮ: ಈ ಬಗ್ಗೆ ಟಿ.ಇ.ಸಿ ಇಲಾಖೆಗೆ ಪತ್ರ ಬರೆಯಲು ಸೂಚಿಸಿದೆ ಕ್ರಮಕೈಗೊಳ್ಳಲು ತಿಳಿಸಿದರು

7) ವಾರ್ಡ್ ಸಂಖ್ಯೆ:110 14ನೇ ಅಡ್ಡರಸ್ತೆ ಸಂಪಂಗಿರಾಮನಗರದ ಎಲ್.ಟಿ.ಬಾಕ್ಸ್ ಸಹಾಯಕ ನಿರ್ವಾಹಕ ಅಭಿಯಂತರರು ರವರಿಗೆ ಸೂಚಿಸಿದರು

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೆಸ್ಕಾಂ-W-5 ರವರಿಗೆ ಕ್ರಮಕೈಗೊಳ್ಳುವಂತೆ ತಿಳಿಸಿದರು

8) ನಮ್ಮ ಕ್ಲೀನಕ್ ಬಗ್ಗೆ ಪ್ರಕಾಶ್ ನೆಡಗಾಂಡಿ ಈಗಾಗಲೇ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಕಡತವು ಪ್ರಗತಿಯಲ್ಲಿರುವುದಾಗಿ ಶ್ರೀ.ಈರಣ್ಣ ರವರು ತಿಳಿಸಿದರು.

ಕ್ರಮ: ಆರೋಗ್ಯ ವೈದ್ಯಾಧಿಕಾರಿಯವರಿಗೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

9) ಭಜರಂಗಿ ಬಲಿವ್ಯಾಯಾಮ ಶಾಲೆಯಲ್ಲಿ ಸ್ಥಳ ಲಭ್ಯವಿದ್ದು ಅದರಲ್ಲಿ ನಮ್ಮ ಕ್ಲಿನಕ್‌ನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲು ಶ್ರೀ.ಈರಣ್ಣ ರವರು ಸೂಚಿಸಿದರು.

10) ಅಲಿ ಆಸ್ಕರ್ ರಸ್ತೆಯಲ್ಲಿ ಪೈಪುಗಳನ್ನು ತೆರವುಗೊಳಿಸಲು ಸ್ಮಾರ್ಟ್ ಸಿಟಿ ಇಲಾಖೆಗೆ ಸೂಚಿಸಿದರು.

11) ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನೆಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ನೋಡೆಲ್ ಅಧಿಕಾರಿಗಳು
ವಾರ್ಡ್-110 ಸಂಪಂಗಿರಾಮನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-110, ಸಂಪಂಗಿರಾಮನಗರ
ಬಿ.ಬಿ.ಎಂ.ಪಿ

Scanned with CamSca

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಮುಖ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರ ಅವಗಾಹನೆಗೆ ಕಳುಹಿಸಲಾಗಿದೆ
7) ಕಛೇರಿ ಕಡತಕ್ಕೆ.

Scanned with CamSca